# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 233/2021</u>

## <u>ದಿನಾಂಕ 04.08.2023</u>

<u>ಫಿರ್ಯಾದಿದಾರರುಃ</u>

ರಾಜ್ಯ ಸರಕಾರದ ಪರಃ ಪಿ.ಎಸ್.ಐ. ಯಾದಗಿರಿ ಸಂಚಾರಿ ಪೊಲೀಸ್ ಠಾಣೆ

**<u>ವಿರುದ್ಧ</u>**

ಬಸವಾಜ ತಂದೆ ಶರಣಪ್ಪ ಗೋಗಿ ಮತ್ತು ಇನ್ನೊಬ್ಬ

ನಾನು, **ಶ್ರೀ ಎಸ್.ಎಸ್. ಕುನ್ನಿಭಾವಿ,** ಮು.ನ್ಯಾ.ದಂ.ಗಳು,ಯಾದಗಿರಿ

ನೀವುಃ

ಆ. ನಂ. 1. ಬಸವಾಜ ತಂದೆ ಶರಣಪ್ಪ ಗೋಗಿ
ವಯಾಃ 35 ವರ್ಷ, ಉಃ ಚಾಲಕ,

ಆ.ನಂ. 2. ವೆಂಕಟರೆಡ್ಡಿ ತಂದೆ ಬಸನಗೌಡ ಮಾಲೀಪಾಟೀಲ
ವಯಾಃ 45 ವರ್ಷ, ಉಃ ಒಕ್ಕಲುತನ
ಇಬ್ಬರೂ ಸಾಃ ಅಬ್ಬೆತುಮಕೂರು, ತಾಃ ಜಿಃ ಯಾದಗಿರಿ.

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

## <u>ಆಪಾದನೆ</u>

ದಿನಾಂಕಃ 07.02.2021 ರಂದು ರಾತ್ರಿ 08.30 ಗಂಟೆಗೆ ಯಾದಗಿರಿ ಸಂಚಾರಿ ಪೊಲೀಸ್ ಠಣಾ ಹದ್ದಿ ಪೈಕಿ, ಯಾದಗಿರಿ ರೇಲ್ವೆ ನಿಲ್ದಾಣದ ಎ.ಟಿ.ಎಂ. ಕೇಂದ್ರದ ಎದುರಿಗೆ ಇರುವ ವಾಹನ ನಿಲುಗಡೆ ಸ್ಥಳದಲ್ಲಿ, ಈ ಪ್ರಕರಣದ 1 ನೇ ಆರೋಪಿಯಾದ ನೀನು, 2 ನೇ ಆರೋಪಿಯ ವಿಮಾ ಪಾಲಿಸಿ ಹೊಂದಿರದ ಕಾರ್ ನಂ. ಕೆಎ-33/ಎಂ-3024 ನೇದ್ದನ್ನು, ನಿರ್ಲಕ್ಷ್ಯತನದಿಂದ ನಡೆಸಿ ವಾಹನವನ್ನು ಹಿಂದೆ ತೆಗೆದುಕೊಳ್ಳುವಾಗ ವಾಹನ ನಿಲುಗಡೆ ಸ್ಥಳದಲ್ಲಿ ನಿಂತಿದ್ದ ಮೃತ ಇಂದರಸಿಂಗ್ ತಂದೆ

ದುರ್ಗಾಸಿಂಗ್ ಠಾಕೂರ್ ಸಾಃ ಕೃಷ್ಣಾ ತಾಃ ಮಕ್ತಲ್ ಜಿಃ ನಾರಾಯಣಪೇಟ ಇವರಿಗೆ ಜೋರಾಗಿ ಢಿಕ್ಕಿಪಡಿಸಿದ್ದರಿಂದ ಸದರಿಯವರು ಹಿಂದಕ್ಕೆ ಬಿದ್ದು, ತಲೆಗೆ ಮತ್ತು ದೇಹದ ಇತರೆ ಭಾಗಕ್ಕೆ ತೀರ್ವ ಸ್ವರೂಪದ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 08.02.2021 ರಂದು ಬೆ. 09.00 ಗಂಟೆಗೆ ಇಂದರಸಿಂಗ್ ತಂದೆ ದುರ್ಗಾಸಿಂಗ್ ಠಾಕೂರ್ ಮರಣ ಹೊಂದಿದ್ದು, ಆ ಮೇರೆಗೆ ನೀನು 1 ನೇ ಆರೋಪಿ ಭಾ.ದಂ.ಸಂ. ಕಲಂ. 279, 304(ಎ) ಹಾಗೂ ಭಾ.ಮೋ.ವಾ. ಕಲಂ. 187 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಅಂತಾ, ನೀವು 2 ನೇ ಆರೋಪಿ ನಿಮ್ಮ ವಾಹನಕ್ಕೆ ವಿಮಾ ಸೌಲಭ್ಯ ಪಡೆಯದೇ 1 ನೇ ಆರೋಪಿಗೆ ಕಾರ್ ಚಲಾಯಿಸಲು ನೀಡಿದ್ದು ಆ ಮೇರೆಗೆ 2 ನೇ ಆರೋಪಿಯಾದ ನೀನು ಭಾ.ಮೋ.ವಾ. ಕಾಯ್ದೆ ಕಲಂ. 196 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಃ 1 - ಈಗ ಓದಿ ಹೇಳಿದ ಆಪಾದನೆಯು ನಿಮಗೆ ತಿಳಿಯಿತೆ ?

ಉತ್ತರಃ

ಆ. ನಂ. 1.

ಆ. ನಂ. 2.

ಪ್ರಃ 2- ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷಣೆ ಇದೆಯಾ?

ಉತ್ತರಃ

ಆ. ನಂ. 1.

ಆ. ನಂ. 2.

(ಈ ಮೂಲಕ ದೃಢೀಕರಿಸುವುದೇನೆಂದರೆ ಆಪಾದನೆಯನ್ನು ಆರೋಪಿತನಿಗೆ ತಿಳಿಯುವ ಹಾಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**ಮು.ನ್ಯಾ.ದಂ.ಗಳು, ಯಾದಗಿರಿ**